SS – 465

13

# I Semester B.Com. Examination, Nov./Dec. 2018
## (F+R) (CBCS) (2014-15 and Onwards)
## COMMERCE
## 1.3 : Financial Accounting

Time : 3 Hours Max. Marks : 70

***Instruction :*** *Answer should be written completely either in English or in Kannada.*

SECTION – A

Answer **any five** sub-questions. **Each** sub-question carries **two** marks. **(5×2=10)**

1. a) Define GAAP.
   b) State the objectives of Accounting Standards.
   c) Give any four demerits of Single Entry system.
   d) What is Installment system of purchase ?
   e) What is meant by Dead Rent ?
   f) How do you treat the excess price paid by the purchasing company while purchasing the assets and liabilities of the firm ?
   g) What do you mean by purchase consideration ?

SECTION – B

Answer **any three** questions. **Each** question carries **six** marks. **(3×6=18)**

2. Discuss the users of Accounting Information.

3. Ascertion credit sales and credit purchases from the following :

| | ₹ |
|---|---|
| Opening Balance of Debtors | 10,000 |
| Closing Balance of Debtors | 14,000 |
| Opening Balance of Creditors | 8,000 |
| Closing Balance of Creditors | 9,500 |
| Cash Received from Debtors | 16,400 |
| Cash paid to Creditors | 12,000 |
| Discount Allowed | 3,000 |

P.T.O.

| | |
|---|---|
| Discount Received | 2,000 |
| B/R Received from Debtors | 12,500 |
| Acceptances given to Creditors | 8,000 |
| Bad debts | 2,000 |
| B/R dishonoured | 2,500 |

4. National Trading Company bought a motor van from Honda Company on hire purchase system over a term of 2 years starting from 1st April 2016. The cash price of the motor van was ₹ 29,740 and the payment was to be made as follows : ₹ 2,740 on signing of the agreement and the balance in 4 half yearly installment of ₹ 7,500 each. The Honda Company changes interest at the rate of 8% p.a. working on half yearly rest. Calculate the interest included in each installment.

5. Bharath mines took a lease from a land Lord for a period of 10 years from 1st April 2012 on royalty of ₹ 5 per ton of coal raised with a dead rent of ₹ 20,000 and power to recoup short working during the first four years of the lease. The output was as follows :

| **Year** | **Output (Tons)** |
|---|---|
| 2012 – 13 | 2,000 |
| 2013 – 14 | 3,000 |
| 2014 – 15 | 4,000 |
| 2015 – 16 | 4,500 |
| 2016 – 17 | 5,000 |

Prepare an analytical table of royalties from the above details.

6. Pass incorporation entries in the books of a company from the following particulars.

| | |
|---|---|
| Purchase consideration | ₹ 10,00,000 |
| Value of sundry assets taken over | ₹ 9,50,000 |
| Current liabilities taken over | ₹ 75,000 |

Settlement of purchase consideration,

75% in equity shares of ₹ 100 each, 1,000 debentures of ₹ 100 each and the balance in cash.

## SECTION – C

Answer **any three** questions. **Each** question carries **fourteen** marks. **(3×14=42)**

7. A Mining Company leased a property from Ajay Singh at a royalty of ₹ 5 per ton with a minimum rent of ₹ 12,000 p.a. each year excess of minimum rent over royalty is recoverable out of the royalties of the next three years.

The results of the working are as follows :

| Year | Output (Tons) |
|---|---|
| 2013 – 14 | 1,000 |
| 2014 – 15 | 1,500 |
| 2015 – 16 | 2,000 |
| 2016 – 17 | 3,000 |
| 2017 – 18 | 4,500 |

**Prepare** :

a) Minimum Rent Account

b) Royalties Account

c) Short Workings Account

d) Ajay Singh's Account

8. Ram purchased a motor car on hire purchase system from Sagar Motors on 1st April 2016. He pays ₹ 1,00,000 down payment and ₹ 80,000, ₹ 70,000 and ₹ 60,000 at the end of 1st, 2nd and 3rd year respectively. Interest is changed by the vendor at 20% p.a. Ram writes off 10% p.a. on diminishing balance method. What was the cash price of the motor car ? Also prepare the necessary Ledger Accounts in the books of Ram under Asset Accrual method.

9. The books of Suresh which are maintained under Single Entry System, reveal the following information.

| Assets and Liabilities | 1-4-2017 | 31-3-2018 |
|---|---|---|
| Cash | 16,800 | 49,900 |
| Stock | 40,000 | 50,000 |
| Debtors | 96,200 | ? |
| Creditors | ? | 40,000 |
| Buildings | 10,000 | 10,000 |

The cash book showed the following information :

| | ₹ |
|---|---|
| Receipts from Debtors | 2,72,000 |
| Private dividend received | 4,000 |
| Business expenses | 39,300 |
| Drawings | 9,200 |
| Paid to creditors | 2,24,000 |
| Discount received | 2,400 |

The total sales during the year were ₹ 2,80,800. Suresh maintained a gross profit of 25% on sales. Prepare Trading and Profit and Loss Account for the year ending 31st March 2018 and Balance sheet as on that date.

10. Ravi and Kiran sharing profits and losses in the ratio of their capitals decided to convert their business into a limited company on 31st March 2018, when their Balance Sheet stood as follows :

**Balance Sheet as on 31st March 2018**

| Liabilities | ₹ | Assets | ₹ |
|---|---|---|---|
| Creditors | 55,000 | Cash | 4,500 |
| Reserve fund | 7,000 | Debtors | 40,000 |
| Capitals : | | Stock | 37,000 |
| Ravi | 75,000 | Plant and Machinery | 85,000 |
| Kiran | 50,000 | Investments | 20,500 |
| | **1,87,000** | | **1,87,000** |

The firm was acquired on the following terms :

a) The company took over the whole concern except cash and investments at 10% less than the book values.

b) The Creditors were taken over at the book figure.

c) The company agreed to pay ₹ 5,000 for goodwill.

d) The firm realized its investments at 5% less than the book value.

e) The purchase price was paid half in cash and half in fully paid shares of the company.

f) The shares are to be dis9tributed according to profit sharing ratio.

Prepare Ledger Accounts to close the books of the firm.

11. a) Calculate the amount of purchase consideration from the following :

Purchasing company agreed to issue 100000 equity shares of ₹ 10 each valued at ₹ 11 per share, 50,000 8% . Debentures of ₹ 10 each at a discount of 5% and pay cash equal to 25% of the total purchase consideration.

b) From the following details find out opening stock :

| | ₹ |
|---|---|
| Cash sales | 15,000 |
| Credit sales | 25,000 |
| Cash purchases | 10,000 |
| Credit purchases | 45,000 |

| | |
|---|---|
| Return inwards | 10,000 |
| Return outwards | 5,000 |
| Carriage inwards | 7,000 |
| Carriage outwards | 8,000 |
| Wages | 5,000 |
| Salaries | 10,000 |

Rate of gross profit 25% on cost.

## ಕನ್ನಡ ಆವೃತ್ತಿ

### ವಿಭಾಗ - ಎ

ಯಾವುದಾದರೂ ಐದು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ ಎರಡು ಅಂಕಗಳು. **(5×2=10)**

1. a) GAAP ನ್ನು ವ್ಯಾಖ್ಯಾನಿಸಿ.
   b) ಲೆಕ್ಕಶಾಸ್ತ್ರ ಪ್ರಮಾಣಕದ ಉದ್ದೇಶಗಳನ್ನು ತಿಳಿಸಿ.
   c) ಏಕ ನಮೂದು ಪದ್ಧತಿಯ ಯಾವುದಾದರೂ ನಾಲ್ಕು ದೋಷಗಳನ್ನು ತಿಳಿಸಿ.
   d) ಕಂತು ಖರೀದಿ ಪದ್ಧತಿ ಎಂದರೇನು ?
   e) ಕನಿಷ್ಠ ಬಾಡಿಗೆ ಎಂದರೇನು ?
   f) ಖರೀದಿ ಕಂಪನಿಯು ಬೇರೆ ಸಂಸ್ಥೆಯ ಆಸ್ತಿ ಮತ್ತು ಜವಾಬ್ದಾರಿಗಳಿಗಿಂತಲೂ ಹೆಚ್ಚು ಬೆಲೆ ಕೊಟ್ಟಿದ್ದಲ್ಲಿ, ವ್ಯತ್ಯಾಸವನ್ನು ಏನೆಂದು ಪರಿಗಣಿಸುವಿರಿ ?
   g) ಖರೀದಿ ಬೆಲೆ ಎಂದರೇನು ?

### ವಿಭಾಗ - ಬಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು. **(3×6=18)**

2. ಲೆಕ್ಕಶಾಸ್ತ್ರ ಮಾಹಿತಿಯ ಉಪಯೋಗ ಪಡೆಯುವವರ ಬಗ್ಗೆ ಚರ್ಚಿಸಿ.
3. ಈ ಕೆಳಗಿನ ವಿವರಗಳಿಂದ ಉದ್ದರಿ ಮಾರಾಟ ಮತ್ತು ಉದ್ದರಿ ಖರೀದಿಯನ್ನು ಕಂಡುಹಿಡಿಯಿರಿ :

| | ರೂ. |
|---|---|
| ಋಣಿಗಳ ಆರಂಭಿಕ ಶಿಲ್ಕು | 10,000 |
| ಋಣಿಗಳ ಅಂತಿಮ ಶಿಲ್ಕು | 14,000 |
| ಧನಿಗಳ ಆರಂಭಿಕ ಶಿಲ್ಕು | 8,000 |
| ಧನಿಗಳ ಅಂತಿಮ ಶಿಲ್ಕು | 9,500 |
| ಋಣಿಗಳಿಂದ ಪಡೆದ ನಗದು | 16,400 |
| ಧನಿಗಳಿಗೆ ಕೊಟ್ಟ ನಗದು | 12,000 |
| ಸೋಡಿ ಕೊಟ್ಟಿದ್ದು | 3,000 |
| ಸೋಡಿ ಬಂದದ್ದು | 2,000 |
| ಋಣಿಗಳಿಂದ ಬಂದ ಹುಂಡಿ | 12,500 |
| ಧನಿಗಳಿಗೆ ಕೊಟ್ಟ ಹುಂಡಿಗಳು | 8,000 |
| ಕರಡು ಸಾಲ | 2,000 |
| ತಿರಸ್ಕೃತವಾದ ಹುಂಡಿಗಳು | 2,500 |

4. ನ್ಯಾಷನಲ್ ಟ್ರೇಡಿಂಗ್ ಕಂಪನಿಯವರು ಹೋಂಡ ಕಂಪನಿಯವರಿಂದ ಒಂದು ಮೋಟಾರು ವ್ಯಾನನ್ನು 1-4-2016 ರಂದು ಎರಡು ವರ್ಷದ ಅವಧಿಗೆ ಬಾಡಿಗೆ ಕೊಳ್ಳುವಿಕೆ ಪದ್ಧತಿಯಲ್ಲಿ ಖರೀದಿಸಿದರು. ಮೋಟಾರು ವ್ಯಾನಿನ ನಗದು ಬೆಲೆಯು ರೂ. 29,740 ಆಗಿತ್ತು ಮತ್ತು ಪಾವತಿಯು ಕೆಳಕಂಡಂತೆ ಇರುತ್ತದೆ. ಒಪ್ಪಂದದ ವೇಳೆ ಪಾವತಿಸಿದ ಹಣ ರೂ. 2,740 ಉಳಿದ ಹಣವನ್ನು ನಾಲ್ಕು ಅರ್ಧ ವಾರ್ಷಿಕ ಕಂತುಗಳಲ್ಲಿ ಪ್ರತಿ ಕಂತು ರೂ. 7,500. ಹೋಂಡ ಕಂಪನಿಯವರು ವಾರ್ಷಿಕ ಶೇ. 8 ರ ಬಡ್ಡಿಯನ್ನು ಹಾಕಿರುತ್ತಾರೆ. ಆ ಬಡ್ಡಿ ದರವನ್ನು ಅರ್ಧ ವಾರ್ಷಿಕದಂತೆ ಪರಿಗಣಿಸಿ. ಪ್ರತಿ ಕಂತಿನಲ್ಲಿ ಸೇರಿರುವ ಬಡ್ಡಿಯನ್ನು ಕಂಡುಹಿಡಿಯಿರಿ.

5. 1-4-2012ರಂದು ಭಾರತ್ ಮೈನ್ಸ್‌ರವರು ಗುತ್ತಿಗೆ ಆಧಾರದ ಮೇಲೆ ಒಂದು ಗಣಿಯನ್ನು 10 ವರ್ಷದ ಅವಧಿಗೆ ಪಡೆದಿರುತ್ತಾರೆ. ರಾಜಧನ ಒಂದು ಟನ್ನಿಗೆ ರೂ. 5 ರಂತೆ ಮತ್ತು ಕನಿಷ್ಠ ಬಾಡಿಗೆ ರೂ. 20,000 ಮತ್ತು ಕೊರತೆ ಉತ್ಪಾದನೆಯನ್ನು ಮೊದಲ ನಾಲ್ಕು ವರ್ಷಗಳಲ್ಲಿ ಮಾತ್ರ ಹಿಂಪಡೆಯುವುದು. ಉತ್ಪಾದನೆಯು ಈ ಕೆಳಕಂಡಂತಿದೆ :

| ವರ್ಷ | ಉತ್ಪಾದನೆ (ಟನ್ನುಗಳು) |
|---|---|
| 2012 – 13 | 2,000 |
| 2013 – 14 | 3,000 |
| 2014 – 15 | 4,000 |
| 2015 – 16 | 4,500 |
| 2016 – 17 | 5,000 |

ಮೇಲ್ಕಂಡ ವಿವರಗಳಿಂದ ರಾಜಧನ ವಿಶ್ಲೇಷಣ ಪಟ್ಟಿಯನ್ನು ತಯಾರಿಸಿ.

6. ಈ ಕೆಳಗಿನ ಮಾಹಿತಿಯಿಂದ ಕಂಪನಿ ಲೆಕ್ಕ ಪುಸ್ತಕದಲ್ಲಿ ಸಂಯೋಜನಾ ರೋಜು ದಾಖಲೆಗಳನ್ನು ಬರೆಯಿರಿ.

| | |
|---|---|
| ಖರೀದಿ ಬೆಲೆ | ರೂ. 10,00,000 |
| ಸ್ವಾಧೀನ ಪಡಿಸಿಕೊಂಡ ಸ್ವತ್ತಿನ ಬೆಲೆ | ರೂ. 9,50,000 |
| ಪ್ರಸ್ತುತ ಹೊಣೆಗಾರಿಕೆಗಳನ್ನು ವಹಿಸಿಕೊಂಡದ್ದು | ರೂ. 75,000 |

ಖರೀದಿ ಬೆಲೆಯನ್ನು ವಿಲೇವಾರಿ ಮಾಡಿದ ವಿಧಾನ,

ಶೇ. 75 ಭಾಗ ಸಾಮಾನ್ಯ ಶೇರುಗಳ ಮುಖಬೆಲೆ 100 ರೂ.ಗಳಂತೆ, ರೂ. 100 ರ ಮುಖಬೆಲೆಯ 1000 ಸಾಲಪತ್ರಗಳು ಮತ್ತು ಉಳಿದ ಶಿಲ್ಕನ್ನು ನಗದು ಮೂಲಕ.

## ವಿಭಾಗ - ಸಿ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿ. **ಪ್ರತಿಯೊಂದಕ್ಕೆ ಹದಿನಾಲ್ಕು** ಅಂಕಗಳು. **(3×14=42)**

7. ಒಂದು ಮೈನಿಂಗ್ ಕಂಪನಿಯವರು ಅಜಯ್ ಸಿಂಗ್‌ರವರಿಂದ ಒಂದು ರಾಜಧನ ಒಪ್ಪಂದವನ್ನು ಒಂದು ಟನ್ನಿಗೆ ರೂ.5ರಂತೆ ಮತ್ತು ವಾರ್ಷಿಕ ಕನಿಷ್ಠ ಬಾಡಿಗೆ ರೂ.12,000 ಮಾಡಿಕೊಂಡಿರುತ್ತಾರೆ. ಕೊರತೆ ಉತ್ಪಾದನೆಯನ್ನು ಮುಂದಿನ ಮೂರು ವರ್ಷಗಳಲ್ಲಿ ಹಿಂಪಡೆಯುವುದು.

ಮೊದಲ ಐದು ವರ್ಷಗಳ ಉತ್ಪಾದನೆ ಕೆಳಕಂಡಂತಿದೆ :

| ವರ್ಷ | ಉತ್ಪಾದನೆ (ಟನ್ನುಗಳಲ್ಲಿ) |
|---|---|
| 2013 – 14 | 1,000 |
| 2014 – 15 | 1,500 |
| 2015 – 16 | 2,000 |
| 2016 – 17 | 3,000 |
| 2017 – 18 | 4,500 |

a) ಕನಿಷ್ಠ ಬಾಡಿಗೆ ಖಾತೆ

b) ರಾಜಧನ ಖಾತೆ

c) ಕೊರತೆ ಉತ್ಪಾದನೆ ಖಾತೆ

d) ಅಜಯ್ ಸಿಂಗ್‌ರವರ ಖಾತೆಯನ್ನು ತಯಾರಿಸಿ.

8. ರಾಮುರವರು ಸಾಗರ್ ಮೋಟಾರ್‌ರವರಿಂದ ಒಂದು ಮೋಟಾರು ಕಾರನ್ನು 1-4-2016ರಂದು ಬಾಡಿಗೆ ಖರೀದಿ ಪದ್ಧತಿಯ ಮೂಲಕ ಪಡೆದಿರುತ್ತಾರೆ. ರೂ. 1,00,000 ಒಪ್ಪಂದದ ವೇಳೆ ಕೊಟ್ಟು, ಬಾಕಿ ಹಣವನ್ನು ರೂ. 80,000, ರೂ. 70,000 ಮತ್ತು ರೂ. 60,000 ಮೊದಲಿನ ವರ್ಷ, ಎರಡನೇ ವರ್ಷ ಮತ್ತು ಮೂರನೇ ವರ್ಷ ಕ್ರಮವಾಗಿ ಪಡೆಯುವುದು. ವಿಕ್ರಯದಾರನು ವಾರ್ಷಿಕ ಶೇಕಡಾ 20ರಂತೆ ಬಡ್ಡಿ ಹಾಕಿರುತ್ತಾನೆ. ಇಳಿಕೆ ಆಧಾರದ ಮೇಲೆ ರಾಮುರವರ ವಾರ್ಷಿಕ ಶೇ. 10ರಂತೆ ಸವಕಳಿಯನ್ನು ಲೆಕ್ಕ ಹಾಕಿರುತ್ತಾರೆ. ಮೋಟಾರು ಕಾರಿನ ನಗದು ಬೆಲೆಯನ್ನು ಕಂಡುಹಿಡಿಯಿರಿ ಮತ್ತು ಅಗತ್ಯವಾದ ಎಲ್ಲಾ ಖಾತೆಗಳನ್ನು ಆಸ್ತಿ ಸಂಚಯ ಪದ್ಧತಿಯಲ್ಲಿ ತಯಾರಿಸಿ.

9. ಸುರೇಶನು ತನ್ನ ಲೆಕ್ಕ ಪುಸ್ತಕಗಳನ್ನು ಏಕ ನಮೂದು ಪದ್ಧತಿಯಲ್ಲಿ ಇಟ್ಟಿರುತ್ತಾನೆ. ಈ ಕೆಳಕಂಡ ಮಾಹಿತಿಯು ಲಭ್ಯವಿರುತ್ತದೆ.

| ಆಸ್ತಿ ಮತ್ತು ಜವಾಬ್ದಾರಿ | 1-4-2017<br>ರೂ. | 31-3-2018<br>ರೂ. |
|---|---|---|
| ನಗದು | 16,800 | 49,900 |
| ದಾಸ್ತಾನು | 40,000 | 50,000 |
| ಸಾಲಗಾರರು | 96,200 | ? |
| ಧನಿಗಳು | ? | 40,000 |
| ಕಟ್ಟಡಗಳು | 10,000 | 10,000 |

ನಗದು ಪುಸ್ತಕವು ಕೆಳಕಂಡ ಮಾಹಿತಿಯನ್ನು ಒದಗಿಸುತ್ತದೆ :

| | ರೂ. |
|---|---|
| ಋಣಿಗಳಿಂದ ಪಡೆದ ನಗದು | 2,72,000 |
| ಬಂದಿರುವ ಖಾಸಗಿ ಲಾಭಾಂಶ | 4,000 |
| ವ್ಯವಹಾರದ ಖರ್ಚುಗಳು | 39,300 |
| ಸ್ವಂತ ಬಳಕೆಗೆ | 9,200 |
| ಧನಿಗಳಿಗೆ ಕೊಟ್ಟ ನಗದು | 2,24,000 |
| ಪಡೆದಿರುವ ಸೋಡಿ | 2,400 |
| ವಾರ್ಷಿಕ ಒಟ್ಟು ಮಾರಾಟ | 2,80,800 |

ಸುರೇಶನು ತನ್ನ ವ್ಯಾಪಾರದ ಶೇ. 25ರಷ್ಟು ಅಧಿಕೃತ ಲಾಭ ಹೊಂದಿರುತ್ತಾನೆ. ಮಾರ್ಚ್ 31, 2018 ಕ್ಕೆ ವ್ಯಾಪಾರ ಮತ್ತು ಲಾಭ ಮತ್ತು ನಷ್ಟ ಖಾತೆ ಮತ್ತು ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿ.

10. ರವಿ ಮತ್ತು ಕಿರಣ್ ಲಾಭ ಮತ್ತು ನಷ್ಟಗಳನ್ನು ತಮ್ಮ ಬಂಡವಾಳದ ಅನುಗುಣವಾಗಿ ಹಂಚಿಕೊಳ್ಳುವ ಪಾಲುದಾರರು. ಇವರು ತಮ್ಮ ವ್ಯಾಪಾರ ಸಂಸ್ಥೆಯನ್ನು ಒಂದು ನಿಯಮಿತ ಕಂಪನಿಯಾಗಿ ದಿನಾಂಕ 31-3-2018 ರಂದು ಪರಿವರ್ತಿಸಿರುತ್ತಾರೆ. ಇವರ ಆಸ್ತಿ ಜವಾಬ್ದಾರಿ ಪಟ್ಟಿ 31-3-2018 ರಲ್ಲಿ ಈ ರೀತಿ ಇದೆ :

**ಅಢಾವೆ ಪತ್ರ ದಿನಾಂಕ 31-3-2018**

| ಜವಬ್ದಾರಿಗಳು | ರೂ. | ಆಸ್ತಿಗಳು | ರೂ. |
|---|---|---|---|
| ಧನಿಗಳು | 55,000 | ನಗದು | 4,500 |
| ಕಾಯ್ದಿರಿಸಿದ ನಿಧಿ | 7,000 | ಋಣಿಗಳು | 40,000 |

| | | | |
|---|---|---|---|
| ಬಂಡವಾಳ : | | ದಾಸ್ತಾನು | 37,000 |
| ರವಿ | 75,000 | ಸ್ಥಾವರ ಮತ್ತು ಯಂತ್ರೋಪಕರಣ | 85,000 |
| ಕಿರಣ್ | 50,000 | ಹೂಡಿಕೆ | 20,500 |
| | **1,87,000** | | **1,87,000** |

ಸಂಸ್ಥೆಯನ್ನು ಕೆಳಕಂಡ ಷರತ್ತುಗಳ ಅನ್ವಯ ಒಪ್ಪಿದರು :

a) ನಗದು ಮತ್ತು ಹೂಡಿಕೆ ಹೊರತು ಪಡಿಸಿ ಎಲ್ಲಾ ಆಸ್ತಿಗಳನ್ನು ಪುಸ್ತಕ ಬೆಲೆಯ ಶೇ. 10 ರಷ್ಟು ಕಡಿತಗೊಳಿಸಿ ತೆಗೆದುಕೊಂಡಿರುತ್ತಾರೆ.

b) ಧನಿಗಳು ಪುಸ್ತಕ ಬೆಲೆಯನ್ನು ಕೊಡಲು ಒಪ್ಪಿರುತ್ತಾರೆ.

c) ಕಂಪನಿಯು ರೂ. 5,000 ಗಳ ಕೀರ್ತಿಮೌಲ್ಯವನ್ನು ಕೊಡಲು ಒಪ್ಪಿರುತ್ತದೆ.

d) ಶೇ. 5ರಷ್ಟು ಕಡಿಮೆ ಬೆಲೆಗೆ ಹೂಡಿಕೆಯನ್ನು ಮಾರಾಟ ಮಾಡಲಾಗಿದೆ.

e) ಖರೀದಿ ಬೆಲೆಯ ಅರ್ಧದಷ್ಟು ನಗದು ರೂಪದಲ್ಲಿಯೂ ಮತ್ತು ಇನ್ನುಳಿದ ಅರ್ಧದಷ್ಟು ಶೇರುಗಳ ಮೂಲಕ ಕೊಟ್ಟಿರುತ್ತಾರೆ.

f) ಶೇರುಗಳನ್ನು ಪಾಲುದಾರರ ಲಾಭ ಮತ್ತು ನಷ್ಟದ ಅನುಪಾತದಲ್ಲಿ ಹಂಚಿರಿ.

ಪಾಲುಗಾರರಿಗೆ ಸಂಸ್ಥೆಯ ಪುಸ್ತಕದಲ್ಲಿ ಅಗತ್ಯವಾದ ಎಲ್ಲಾ ಖಾತೆಗಳನ್ನು ತಯಾರಿಸಿ.

11. a) ಈ ಕೆಳಗಿನ ವಿವರಗಳಿಂದ ಖರೀದಿ ಬೆಲೆಯನ್ನು ಕಂಡುಹಿಡಿಯಿರಿ :

ಖರೀದಿಸಿದ ಕಂಪನಿಯು ರೂ. 10 ಮುಖಬೆಲೆಯ 100000 ಸಾಮಾನ್ಯ ಶೇರುಗಳನ್ನು ರೂ. 11 ರಂತೆ ನೀಡಿತು, 50,000, ಶೇ. 8 ಸಾಲ ಪತ್ರಗಳನ್ನು ಮುಖಬೆಲೆಯ ರೂ. 10, ಶೇ. 5 ರಿಯಾಯಿತಿ ದರದಲ್ಲಿ ನೀಡಿತು ಮತ್ತು ನಗದು ಖರೀದಿ ಬೆಲೆಯ ಶೇ. 25 ರ ಸಮಾನಾಗಿ ನಗದು ಕೊಡಲು ಒಪ್ಪಿರುತ್ತಾರೆ.

b) ಈ ಕೆಳಕಂಡ ವಿವರಗಳಿಂದ ಪ್ರಾರಂಭಿಕ ಸರಕನ್ನು ಕಂಡುಹಿಡಿಯಿರಿ :

| | ರೂ. |
|---|---|
| ನಗದು ಮಾರಾಟ | 15,000 |
| ಉದ್ದರಿ ಮಾರಾಟ | 25,000 |
| ನಗದು ಖರೀದಿ | 10,000 |
| ಉದ್ದರಿ ಖರೀದಿ | 45,000 |
| ಒಳಬಂದ ಸರಕು | 10,000 |
| ಹೊರಹೋದ ಸರಕು | 5,000 |
| ಒಳ ಸಾರಿಗೆ ವೆಚ್ಚ | 7,000 |
| ಹೊರ ಸಾರಿಗೆ ವೆಚ್ಚ | 8,000 |
| ಕೂಲಿ | 5,000 |
| ಸಂಬಳ | 10,000 |

ಸ್ಥೂಲ ಲಾಭದ ದರ ವೆಚ್ಚದ ಮೇಲೆ ಶೇ.25ರಷ್ಟು.